# ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:17-08-2015ರ ನಡವಳಿಗಳು

## ವಿಷಯದ ಸಂಖ್ಯೆ : 162 / 2015-16

ವಿಷಯ: ಸರ್ವೆ ನಂ.143, ಬಿ.ಸುಬ್ಬರಾಯಪ್ಪನಪಾಳ್ಯ ಗ್ರಾಮದಲ್ಲಿ ಕಾಂಕ್ರೀಟ್ ರಸ್ತೆ, ಆರ್.ಸಿ.ಸಿ. ಚರಂಡಿ ನಿರ್ಮಿಸುವ ಕಾಮಗಾರಿ ಕುರಿತು

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸ್ವತ್ತಾದ ಕುಂಬಳಗೂಡು ಸರ್ವೆ ನಂ.143, ಬಿ.ಸುಬ್ಬರಾಯನಪಾಳ್ಯ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕಿನ 10 ಎಕರೆ ಜಮೀನಿನಲ್ಲಿ, ಪಾಲಿಕೆಯ ವತಿಯಿಂದ ಪ್ರತಿನಿತ್ಯ 200 ಮೆ.ಟನ್ ಸಾಮರ್ಥ್ಯದ ಘನತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪಿಸಲು ಕ್ರಮವಹಿಸಲಾಗಿದ್ದು, ಮೆ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆಯ ವತಿಯಿಂದ ಕಾಮಗಾರಿ ಪ್ರಾರಂಭಿಸಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದ್ದ ವೇಳೆಯಲ್ಲಿ ಸ್ಥಳೀಯ ಗ್ರಾಮಸ್ಥರು ಪ್ರತಿಭಟನೆ ನಡೆಸಿ, ಕಾಮಗಾರಿ ಸ್ಥಗಿತಗೊಳಿಸಿ, ಬಿ.ಸುಬ್ಬರಾಯನಪಾಳ್ಯ ಗ್ರಾಮದಲ್ಲಿ ಈ ಕೆಳಕಂಡ ಮೂಲಭೂತ ಸೌಕರ್ಯ ಒದಗಿಸಿದಲ್ಲಿ ಮಾತ್ರ ಉದ್ದೇಶಿತ ತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪಿಸಲು ಅನುವು ಮಾಡಿಕೊಡುವುದಾಗಿ ತಿಳಿಸಿದ್ದರು.

- ಒಂದನೇ ಮೈಲು ಕಲ್ಲುನಿಂದ ಸುಬ್ಬರಾಯನಪಾಳ್ಯ ಎ, ಬಿ ಮತ್ತು ಸಿ ತನಕ 60 ಅಡಿ ಅಗಲದ ರಸ್ತೆ ನಿರ್ಮಾಣ ಮಾಡಿ, ಡಾಂಬರೀಕರಣ ಮಾಡಿ ರಸ್ತೆಯಲ್ಲಿ ವಿದ್ಯುತ್ ದೀಪಗಳನ್ನು ಅಳವಡಿಸಲು ಕೋರಿರುತ್ತಾರೆ.
- ಬಿ.ಸುಬ್ಬರಾಯನಪಾಳ್ಯದಲ್ಲಿ ಸಮುದಾಯ ಭವನ ನಿರ್ಮಿಸುವುದು.
- ಗ್ರಾಮಕ್ಕೆ ಶುದ್ಧ ಕುಡಿಯುವ ನೀರು ಒದಗಿಸುವುದು.
- ಗ್ರಾಮದ 20 ಜನರಿಗೆ ಕೆಲಸ ಕೊಡುವುದು.
- ಗ್ರಾಮಕ್ಕೆ ಆಸ್ಪತ್ರೆಯನ್ನು ನಿರ್ಮಾಣ ಮಾಡುವುದು.
- ಗ್ರಾಮದಲ್ಲಿ ಬಡ ಭೋವಿ ಜನಾಂಗದವರಿಗೆ ಮನೆಗಳನ್ನು ಕಟ್ಟಿಕೊಡುವುದು.
- ಬಿ.ಸುಬ್ಬರಾಯನಪಾಳ್ಯದ ದೇವಸ್ಥಾನಕ್ಕೆ ಕಟ್ಟಡ ನಿರ್ಮಾಣ ಮಾಡುವುದು.
- ಅಂಗವಿಕಲರಿಗೆ ದ್ವಿಚಕ್ರ ವಾಹನ ಕೊಡುವುದು.
- ಗ್ರಾಮಕ್ಕೆ ವಾರಕ್ಕೆ ನಾಲ್ಕು ಸಾರಿ ಸೊಳ್ಳೆ, ನೊಣ ಸಾಯುವುದಕ್ಕೆ ಔಷಧಿ ಒಡೆಯುವುದು ಮತ್ತು ವಾರಕ್ಕೊಂದು ದಿನ ಡಾಕ್ಟರ್ ಬರಬೇಕು.

ಈ ಮೇರೆಗೆ ಸ್ಥಳೀಯ ಮಾನ್ಯ ಶಾಸಕರು ದಿನಾಂಕ:22-08-2014 ರಂದು ಪತ್ರ ಸಲ್ಲಿಸಿ, ಗ್ರಾಮಸ್ಥರು ಕೋರಿರುವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ತಿಳಿಸಿರುತ್ತಾರೆ. ಈ ಮೇರೆಗೆ ಬಿ.ಸುಬ್ಬರಾಯನಪಾಳ್ಯದ ಗ್ರಾಮಸ್ಥರು ಕೋರಿರುವ ಅಭಿವೃದ್ಧಿ ಕಾಮಗಾರಿಗಳನ್ನು ಹಂತ ಹಂತವಾಗಿ ಕೈಗೊಳ್ಳಲು ತೀರ್ಮಾನಿಸಲಾಗಿರುತ್ತದೆ.

ಮೇಲೆ ವಿವರಿಸಿರುವ ಹಿನ್ನಲೆಯಲ್ಲಿ, ಬಿ.ಸುಬ್ಬರಾಯನಪಾಳ್ಯ ಗ್ರಾಮಕ್ಕೆ ಕಾಂಕ್ರೀಟ್ ರಸ್ತೆ ನಿರ್ಮಿಸಲು ಗ್ರಾಮಸ್ಥರ ಕೋರಿಕೆಯ ಮೇರೆಗೆ, ಕಾಂಕ್ರೀಟ್ ರಸ್ತೆ ನಿರ್ಮಿಸುವ ಅವಶ್ಯಕತೆ ಕಂಡುಬಂದ ಹಿನ್ನಲೆಯಲ್ಲಿ, ಬಿ.ಸುಬ್ಬರಾಯನಪಾಳ್ಯ ಗ್ರಾಮದಲ್ಲಿ ಕಾಂಕ್ರೀಟ್ ರಸ್ತೆ, ಆರ್.ಸಿ.ಸಿ. ಚರಂಡಿ ನಿರ್ಮಿಸಲು 2014-15ನೇ ಸಾಲಿನ ಲೋಕೋಪಯೋಗಿ ಇಲಾಖೆ, ದರಪಟ್ಟಿಗಳನ್ನು ಆಧರಿಸಿ ಅಂದಾಜು ಪಟ್ಟಿ ತಯಾರಿಸಲಾಗಿದ್ದು, ಅಂದಾಜು ಮೊತ್ತವು ರೂ.147.20 ಲಕ್ಷಗಳಾಗಿರುತ್ತದೆ.

.......................2

ಸುಬ್ಬರಾಯನಪಾಳ್ಯದಲ್ಲಿ ಘನತ್ಯಾಜ್ಯ ಸಂಸ್ಕರಣೆ ಘಟಕದ ಕಾಮಗಾರಿಯನ್ನು ಈಗಾಗಲೇ ಪ್ರಾರಂಭಿಸಿದ್ದು, ಪ್ರಗತಿಯಲ್ಲಿರುತ್ತದೆ. ಸದರಿ ಘಟಕದ ಕಾಮಗಾರಿಯನ್ನು ಸಾರ್ವಜನಿಕರಿಂದ ಯಾವುದೇ ರೀತಿಯ ಪ್ರತಿರೋಧವಿಲ್ಲದೇ ನಿರ್ವಹಿಸಬೇಕಾಗಿರುವುದರಿಂದ, ಸದರಿ ಕಾಮಗಾರಿಯನ್ನು ತುರ್ತಾಗಿ ಕೈಗೊಳ್ಳಬೇಕಾಗಿರುತ್ತದೆ. ತುರ್ತು ಮತ್ತು ಅವಶ್ಯಕತೆ ಹಿನ್ನಲೆಯಲ್ಲಿ, ಸದರಿ ಬಿ.ಸುಬ್ಬರಾಯನಪಾಳ್ಯ ಗ್ರಾಮದಲ್ಲಿ ಕಾಂಕ್ರೀಟ್ ರಸ್ತೆ, ಆರ್.ಸಿ.ಸಿ. ಚರಂಡಿ ನಿರ್ಮಿಸುವ ಕಾಮಗಾರಿಯನ್ನು ಅಂದು ಅಸ್ತಿತ್ವದಲ್ಲಿದ್ದ ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ಅನುಮೋದನೆ ನಿರೀಕ್ಷಿಸಿ ಮೆ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮೂಲಕ ಈಗಾಗಲೇ ಕೈಗೊಳ್ಳಲಾಗಿರುತ್ತದೆ.

ಸದರಿ ಕಾಮಗಾರಿಗೆ ಅವಶ್ಯವಿರುವ ಮೊತ್ತ ರೂ.147.20 ಲಕ್ಷಗಳ ಮೊತ್ತವನ್ನು ಲೆಕ್ಕಶೀರ್ಷಿಕೆ:ಪಿ-2200 13ನೇ ಹಣಕಾಸು ಆಯೋಗದ ಅಡಿಯಲ್ಲಿ ಅನುದಾನ ಒದಗಿಸಿ ಕಾಮಗಾರಿ ಸಂಖ್ಯೆ:310-15-000082 ಅನ್ನು ನೀಡಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಕೆಳಕಂಡ ಅಂಶಗಳಿಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:23-07-2015ರ ಟಿಪ್ಪಣಿ.

- ಸದರಿ ರೂ.147.20 ಲಕ್ಷಗಳ (ಕೆ.ಆರ್.ಐ.ಡಿ.ಎಲ್. ವೆಚ್ಚ ಸೇರಿ) ಮೊತ್ತದ ಪ್ರಸ್ತಾವನೆಗೆ ಕಾಮಗಾರಿಗೆ ಘಟನೋತ್ತರ ಆಡಳಿತಾತ್ಮಕ ಅನುಮೋದನೆ.
- ತುರ್ತಿನ ಹಿನ್ನಲೆಯಲ್ಲಿ, ಸದರಿ ಕಾಮಗಾರಿಯನ್ನು ಮೆ॥ ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮೂಲಕ ನಿರ್ವಹಿಸಲು ಈಗಾಗಲೇ ಕೈಗೊಂಡಿರುವ ಕ್ರಮಕ್ಕೆ ಸ್ಥಿರೀಕರಣ.

**ತೀರ್ಮಾನ: "ಘಟಕ ನಿರ್ಮಾಣದ ಹಿತದೃಷ್ಟಿಯಿಂದ ತುರ್ತಾಗಿ ಕಾಮಗಾರಿ ತೆಗೆದುಕೊಳ್ಳಲಾಗಿದೆ. ಸದರಿ ಪ್ರದೇಶವು ಬಿ.ಬಿ.ಎಂ.ಪಿ. ವ್ಯಾಪ್ತಿಯ ಸರಹದ್ದಿನಲ್ಲಿರುವುದಿಲ್ಲ. ಆದ್ದರಿಂದ ಮೇಲಿನಂತೆ ಅನುಮೋದಿಸಿದೆ".**

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು